ಶ್ರೀ ಡಿ. ಆರ್. ಪಾಟೀಲ್ (ಗದಗ) :- ಛೇರ್ಮನ್‌ರವರೇ, ಮಾನ್ಯ ಅರಣ್ಯ ಸಚಿವರು ಹೇಳಿದ್ದೆಲ್ಲಾ ಸತ್ಯ ಇದೆ. ಬರೀ ಫಾರೆಸ್ಟ್ ಇಲಾಖೆಯಲ್ಲಿರುತಕ್ಕಂತಹ ಹುದ್ದೆಗಳಿಗೆ ಮಾತ್ರ ಕನ್‌ಸಿಡರ್ ಮಾಡುತ್ತೇವೆಂದು ಹೇಳಿದ್ದಾರೆ. ಅವರಿಗೆ ಎಲಿಜಿಬಿಲಿಟಿ ಇದ್ದರೆ ಬೇರೆ ಇಲಾಖೆಗಳಲ್ಲೂ ಅವಕಾಶ ಬಂದಾಗ ನೇಮಕಾತಿ ಮಾಡುವುದಕ್ಕೆ ಕನ್‌ಸಿಡರ್ ಮಾಡುತ್ತೇವೆ ಅನ್ನುವ ಭರವಸೆ ಕೊಟ್ಟರೆ ಒಳ್ಳೆಯದು. ಮಾನವೀಯತೆ ಆಧಾರದ ಮೇಲೆ ಅವರ ಸಮಸ್ಯೆ ಬಗೆಹರಿಸುವ ಹಾಗಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ :- ಬೇರೆ ಇಲಾಖೆಗಳಿಗೆ ಇವರನ್ನು ತೆಗೆದುಕೊಳ್ಳುತ್ತೇವೆಂದು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂದು ಹೇಳುವ ಮಾತನ್ನು ಹೇಳುವುದಿಲ್ಲ. ಅರಣ್ಯ ಇಲಾಖೆಯಲ್ಲಿ ಪ್ರೇರಕರಾಗಿ ಕೆಲಸ ಮಾಡಿದ್ದಾರೆ, ಅರಣ್ಯ ಇಲಾಖೆಯ ನಿಯಮಗಳಡಿಯಲ್ಲಿ ಬರುವುದಿದ್ದರೆ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಸರ್ಕಾರದ ಉತ್ತರ ಬಹಳ ಚೆನ್ನಾಗಿ ಇದೆ. '' ಕೆಟ್ಟ ಮೇಲೆ ಬುದ್ಧಿ ಬಂದಿತು, ಆಟ್ಟಿದ ಮೇಲೆ ಓಲೆ ಉರಿಯಿತು'' ಎಂದು ಹಳ್ಳಿ ಕಡೆ ಒಂದುಗಾದೆ ಹೇಳುತ್ತಾರೆ. ಈಗ ಸರ್ಕಾರ ಬಹಳ ಕಾಯರತತ್ವರವಾಗಿ.....

ಶ್ರೀ ಎಂ. ಸಿ. ನಾಣಯ್ಯ :- ಸರ್ಕಾರ ಕೆಟ್ಟು ಇಲ್ಲ. ಕೆಟ್ಟ ಮೇಲೆ ಬುದ್ಧಿಯೂ ಬಂದಿಲ್ಲ. ಇದು ಮಾನವೀತಯತೆಯ ದೃಷ್ಟಿಯಿಂದ ಕಾನೂನು ಅಡಿಯಲ್ಲಿ ಅವಕಾಶ ಇಲ್ಲದಿದ್ದರೂ ಸಹ ಸರ್ಕಾರ ಇವರಿಗೆ ಕೆಲಸ ಕೊಡಬೇಕು ಎಂದು ನಾವೇ ಮಾಡಿ ಕೊಂಡಿದ್ದು. ಅವರು ಕೇಳಿದ್ದರಿಂದ ಕೊಟ್ಟಿದ್ದಲ್ಲ. ಮಾಡಬೇಕೆಂದು ಪ್ರಶ್ನೆ ಇತ್ತು ಮಾಡಿದ್ದೇವೆ. ನೀವು ಕೆಟ್ಟ ಮೇಲೆ ಬುದ್ಧಿ ಬಂದಿತು ಎಂದು ಹೇಳುವುದಲ್ಲ. ನೀವು ಹೀಗೆ ಹೇಳಿದರೆ, ಹೇಳಿದ್ದನ್ನೆಲ್ಲಾ ಹಿಂದಕ್ಕೆ ತೆಗೆದುಕೊಳ್ಳುತ್ತೇವೆ. ಕಾನೂನಿನಲ್ಲಿ ಅವಕಾಶ ಇಲ್ಲವೆಂದು ಹೇಳಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾಣಯ್ಯನವರೇ, ದಯವಿಟ್ಟು ಸಿಟ್ಟು ಮಾಡಿಕೊಳ್ಳಬೇಡಿ. ನೀವು ಆ ರೀತಿ.....

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ವಿಜ ರಿಲ್ಯಾಕ್ಸೇಷನ್ ಬಗ್ಗೆ ತಾವು ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಬೇಕು.

(ಆ) <u>ಅಂಕೋಲ ತಾಲ್ಲೂಕಿನ ಬೇಡ್ತಿ ಗಂಗಾವಳಿ ನದಿಗೆ ಹರಿನೀರು ವಿದ್ಯುತ್ ಉತ್ಪಾದಿಸಲು ಖಾಸಗಿಯವರಿಗೆ ಅನುಮತಿ ನೀಡಿರುವುದರಿಂದ ಪರಿಸರಕ್ಕೆ ಹಾನಿ.</u>

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) :- ಅಂಕೋಲ ತಾಲ್ಲೂಕಿನ ಬೇಡ್ತಿ ಗಂಗಾವಳಿ ನದಿಗೆ ಹರಿನೀರು ವಿದ್ಯುತ್ ಉತ್ಪಾದಿಸಲು ಖಾಸಗಿಯವರಿಗೆ ನೀಡಿದ್ದು, ಇದು ಪರಿಸರಕ್ಕೆ ಹಾನಿಯಾಗುತ್ತಿರುವುದರಿಂದ ಅದನ್ನು ಸಂಪೂರ್ಣವಾಗಿ ನಿಲ್ಲಿಸುವ ಬಗ್ಗೆ ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಛೇರ್ಮನ್‌ರವರೇ, ಮಂತ್ರಿಗಳು ಸಮಯ ಕೇಳಿದ್ದಾರೆ. ನಾನು ಇದರ ಬಗ್ಗೆ ಪೂರ್ತಿ ನೋಡಿದ್ದೇನೆ, ನಾನು ಉತ್ತರ ಕೊಡುತ್ತಿದ್ದೆ, ಮಂತ್ರಿಗಳು ನಾಳೆ ನಾಡಿದ್ದು ಬರಲಿ, ಬಂದು ಉತ್ತರ ಕೊಡುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ :- ಮುಖ್ಯ ಮಂತ್ರಿಗಳು ಈ ಇಲಾಖೆಗೆ ಸಂಬಂಧಪಟ್ಟಿರುವುದರಿಂದ ಅವರೇ ಉತ್ತರ ಹೇಳಲಿ.

ಶ್ರೀ ಎಂ.ಸಿ. ನಾಣಯ್ಯ :- ಮುಖ್ಯ ಮಂತ್ರಿಗಳು ಇರುತ್ತಾರೆ, ಸಂಬಂಧಪಟ್ಟ ಇಲಾಖೆಯಿಂದ ಉತ್ತರ ತರಿಸಿ ಅಲ್ಲಿಂದ ಕ್ಲಾರಿಫಿಕೇಷನ್ ತೆಗೆದುಕೊಂಡು ಉತ್ತರ ಕೊಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ :- ಮಾನ್ಯ ಛೇರ್ಮನ್‌ರವರೇ ಇದು ಬಹಳ ಪ್ರಮುಖವಾದ ವಿಷಯ ಇದೆ.

ಶ್ರೀ ಎಂ.ಸಿ. ನಾಣಯ್ಯ :- ಅವರ ಆತಂಕ ನನಗೆ ಅರ್ಥವಾಗುವುದಿಲ್ಲ, ನಾವು ಸರ್ಕಾರದ ಮತಿಯಿಂದ ಆ ಬೇಡ್ತಿ ನದಿಯಲ್ಲಿ run of the river scheme 10- 10 ಮೆ. ವ್ಯಾ. ಗಳ ಆರು ಘಟಕಗಳ ಸ್ಥಾಪನೆಗೆ ವಿದ್ಯುಚ್ಛಕ್ತಿ ಸರ್ವೇ ಕಾರ್ಯಕ್ರಮ ಮಾಡುತ್ತಿರುವುದು. ಬರೀ ಸರ್ವೇ, ಅಲ್ಲದೆ ಬೇರೆ ಯಾವ ತೀರ್ಮಾನವನ್ನು ತೆಗೆದುಕೊಂಡಿಲ್ಲ, ಈ ಸರ್ವೆ ಮಾಡುವುದಕ್ಕೆ ಇವರ ಆತಂಕ, ಪರಿಸರ ನಾಶವಾಗುತ್ತದೆ ಎಂದು ಹೇಳುತ್ತಿದ್ದಾರೆ. ಸರ್ವೇಯನ್ನೂ ಮಾಡಬಾರದೇ?

ಶ್ರೀ ವಿಶ್ವೇಶ್ವರ ಹೆಗಡೆ :- ಏಕೆ ಮಾಡಬಾರದು ಎಂದು ಮನವರಿಕೆ ಮಾಡುವುದಕ್ಕೆ ಗಮನ ಸೆಳೆಯುವ ಸೂಚನೆ ಮಂಡಿಸಿರುವುದು. ಸರ್ವೆ ಮಾಡಿ ಕೊಡುವುದಕ್ಕೆ ನಮಗೆ ವಿರೋಧ ಇದೆ. ಇದನ್ನು ನೀವು ಸರ್ವೇ ಮಾಡುವುದು ಬಹಳ ಸಣ್ಣ ಕೆಲಸ ಎಂದು ನಮ್ಮನ್ನು ಮತ್ತು ಈ ವಿಷಯವನ್ನು ಹಗುರವಾಗಿ ತಿಳಿದುಕೊಂಡು ಹೇಳುವುದು ಬೇಡ. ಸರ್ಕಾರ ಉತ್ತರ ಕೊಡಲಿ, ಸಮಯ ತೆಗೆದುಕೊಳ್ಳಲಿ. ಗಂಭೀರತೆ ಏಕೆ ಇದೆ ಎಂದು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ನಾನು ಗಮನ ಸೆಳೆಯುವುದಕ್ಕೆ ಹೇಳಿ 15 ದಿನಗಳಾದವು, ಅಧಿವೇಶನದ ಪ್ರಾರಂಭವಾದಾಗಿನಿಂದ ಕೊಟ್ಟಿದ್ದೇನೆ. ಇವತ್ತು ಉತ್ತರ ಬಂದಿದೆ. ಹಾಗಾಗಿ ನಾನು ಸರ್ಕಾರದ ಗಮನ ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಸಾಕಷ್ಟು ಯೋಜನೆಗಳು ಬಂದಿವೆ. ನಾವು ಅಲ್ಲಿ ನಮ್ಮ ಸೂಪ, ನಾಗ್ಜರಿ ಇತ್ಯಾದಿಗಳ ಬಗ್ಗೆ ಹೇಳುವುದಿಲ್ಲ, ಅವೆಲ್ಲಾ ರಾಜ್ಯಕ್ಕೆ ಹತ್ತಾರು ಮೆ. ವ್ಯಾ ವಿದ್ಯುಚ್ಛಕ್ತಿಯನ್ನು ಕೊಡುತ್ತಿವೆ.

ವೈಸ್ ಛೇರ್ಮನ್ :- ಇದಕ್ಕೆ ಅಧಿಕೃತವಾಗಿ ಉತ್ತರ ಕೊಡುತ್ತೇವೆಂದು ಹೇಳಿದ ಮೇಲೆ ತಮ್ಮ ಪ್ರಶ್ನೆ ಉದ್ಭವವಾಗುವುದಿಲ್ಲ. ನಾಳೆ ಅಥವಾ ನಾಡಿದ್ದು ಉತ್ತರ ಸಿಗುತ್ತದೆ. ಸಚಿವರ ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ :-ನೀವು ಇವತ್ತು ಹಾಕಿಕೊಂಡಿದ್ದೀರಿ, ಸರ್ಕಾರ ನಾಳೆ ಒಪ್ಪುತ್ತಾ ಕೇಳಿ. ಅವರಿಗೆ ನಾಳೆಯ ಸಮಯ ಒಪ್ಪಿಗೆ ಆಗುತ್ತಾ?

ಶ್ರೀ ಎಂ.ಸಿ ನಾಣಯ್ಯ :- ಛೇರ್ಮನ್‌ರವರೇ, ಅವರ ಆತಂಕವನ್ನು ನಾನು ಬಲ್ಲೆ, ನಾಳೆ ಉತ್ತರವನ್ನು ಕೊಡುತ್ತೇವೆ.

ವೈಸ್ ಛೇರ್ಮನ್ :- ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಪುನ: ಸೇರುತ್ತದೆ

(ಸದನವು 1.50 ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು ಪುನ: ಮಧ್ಯಾಹ್ನ 3- 10 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರಾದ (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದರು.